International Journal of Kannada Research
www.kannadajournal.com

ISSN: 2454–5813
IJKR 2022; 8(1): 84-87
© 2022 IJKR
www.kannadajournal.com
Received: 07-11-2021
Accepted: 10-12-2021

**ಶಿವಕುಮಾರ್ ಆರ್**
ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಕರ್ನಾಟಕ, ಭಾರತ

Corresponding Author:
**ಶಿವಕುಮಾರ್ ಆರ್**
ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಕರ್ನಾಟಕ, ಭಾರತ

# ಯುದ್ಧಗಳು: ಸೈನಿಕರ ಶೋಷಣೆ ಮತ್ತು ವಿಮೋಚನೆ

**ಶಿವಕುಮಾರ ಆರ್**

## ಪರಿಚಯ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಯುದ್ಧಗಳ ವೈಭವಗಳನ್ನು ಕುರಿತು ರಚನೆಯಾದ ಕೃತಿಗಳು ವಿಪುಲವಾಗಿ ದೊರೆಯುತ್ತವೆ. ಸಂಸ್ಕೃತ ಸೇರಿದಂತೆ ಇತರೆ ಭಾಷೆಗಳಲ್ಲಿನ ಸಾಹಿತ್ಯವನ್ನು ಗಮನಿಸಿದಾಗ, ರಾಜಮಹಾರಾಜರುಗಳು ಯುದ್ಧಗಳಲ್ಲಿ ತೋರ್ಪಡಿಸಿರುವ ಶೌರ್ಯ, ಸಾಹಸ ಮತ್ತು ವೈಯಕ್ತಿಕ ವೈಭವೀಕರಣಗಳನ್ನೆ ವಸ್ತುವಾಗಿಟ್ಟುಕೊಂಡು, ವರ್ಣರಂಜಿತವಾಗಿ ಚಿತ್ರಿಸಿರುವುದು ಪುರಾಣ ಮಹಾಕಾವ್ಯಗಳಲ್ಲಿ ಕಂಡುಬರುತ್ತದೆ. ಕನ್ನಡ ಸಾಹಿತ್ಯದಲ್ಲಿ ಎಲ್ಲಾ ಕಾಲಘಟ್ಟಗಳಲ್ಲೂ ಯುದ್ಧಗಳ ಕುರಿತು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ರಚನೆಯಾಗಿರುವುದು ಕಾಣಬಹುದು. ಈ ಹಿನ್ನಲೆಯಲ್ಲಿ ಆಧುನಿಕ ಕನ್ನಡ ನಾಟಕಗಳನ್ನು ಗಮನಿಸಿದಾಗ ರಾಜ ಪ್ರಭುತ್ವದ ಭಾಗವಾಗಿರುವ ಯುದ್ಧಗಳಿಂದ ಜನಸಾಮಾನ್ಯರ ಮೇಲಾದ ಶೋಷಣೆಗಳು ಮತ್ತು ಅದರಿಂದ ವಿಮೋಚನೆಗೊಳ್ಳುವ ಸಂದರ್ಭಗಳನ್ನು ಗುರುತಿಸಬಹುದು. ಪ್ರಸ್ತುತ ಡಾ.ಸಿದ್ದಲಿಂಗಯ್ಯ ಅವರ 'ಏಕಲವ್ಯ' ನಾಟಕ, ಕಿ.ರಂ.ನಾಗರಾಜು ಅವರ 'ಕಾಲಜ್ಞಾನಿ ಕನಕ' ಮತ್ತು ಲಿಂಗದೇವರು ಹಳೆಮನೆ ಅವರ 'ಚಿಕ್ಕದೇವ ಭೂಪ' ನಾಟಕಗಳನ್ನು ಆ ನೆಲೆಯಲ್ಲಿ ಚರ್ಚಿಸಲಾಗಿದೆ.

ರಾಜರು ತಮ್ಮ ಪ್ರಭುತ್ವ ಸಾಧಿಸಿ ಅಧಿಕಾರವನ್ನು ಅನುಭವಿಸಲು ಶ್ರೀಸಾಮಾನ್ಯರ ಬದುಕನ್ನು ಬಲಿ ನೀಡಿದ್ದಾರೆ. ರಾಜರ ಸ್ವಪ್ರತಿಷ್ಠೆಯ ವೈಭವೀಕರಣಕ್ಕೆ ಸೈನಿಕರ ಬದುಕನ್ನು ಧಾರಣವಾಗಿಸುವುದನ್ನು ಇತಿಹಾಸದ ಪುಟಗಳಲ್ಲಿ ಗಮನಿಸಬಹುದು. ತಮ್ಮ ಅಸ್ತಿತ್ವಕ್ಕಾಗಿ ನಡೆಯುವ ಯುದ್ಧಗಳಲ್ಲಿ ಸೈನಿಕರ ಆಸ್ತಿ ಪ್ರಾಣಗಳನ್ನು ಅಡವಿಟ್ಟು ವಿಜಯದ ನಗೆ ಬೀರುವ ರಾಜರುಗಳು ಜನಸಾಮಾನ್ಯರ ಜೀವದ ಬೆಲೆಯನ್ನು ಅರಿಯದವರೇನಲ್ಲ. ಆದರೆ ಇಲ್ಲಿ ಧರ್ಮ ಮತ್ತು ಶ್ರೇಷ್ಠತೆಯ ಹೆಸರಿನಲ್ಲಿ ಸೈನಿಕರ ಜೀವಗಳು ಬಲಿಯಾಗುವುದು ಅವರಿಗೆ ತಪ್ಪೆನಿಸುವುದಿಲ್ಲ. ಅದು ಸೈನಿಕರ ಕರ್ತವ್ಯವೆಂದೇ ಭಾವಿಸುತ್ತಾರೆ. ಆದಿ ಕವಿ ಪಂಪನ 'ಯುದ್ಧವೆಂಬುದು ಸಕಲ ಪ್ರಜಾವಿನಾಶಕರಮಲ್ಲದೆ ಪೆರತಲ್ತು' ಎಂಬ ಮಾತಿನಲ್ಲಿ ಯುದ್ಧದ ದುರಂತ ಅಡಗಿದೆ.

ಭಾರತದಲ್ಲಿ ರಾಜಪ್ರಭುತ್ವದ ಆಳ್ವಿಕೆ ಆರಂಭವಾಗಿ ಒಕ್ಕೂಟ ವ್ಯವಸ್ಥೆಗೆ ರಾಜರುಗಳು ಸೇರುವವರೆಗೆ, ಅವರ ಆಡಳಿತದ ಅವಧಿಯಲ್ಲಿ ತಳವರ್ಗದವರು ಸೈನಿಕರಾಗಿ ಅನುಭವಿಸಿದ ಸಂಕಟಗಳು ಶೋಷಣೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಯುದ್ಧವೆಂಬುದೇ ವರ್ಗ ಶೋಷಣೆಯ ಪ್ರತೀಕವಾಗಿದ್ದು, ರಾಜ್ಯವನ್ನು, ರಾಜ್ಯದ ಸಂಪತ್ತನ್ನು ಹಾಗೂ ರಾಜಪರಿವಾರದವರ ರಕ್ಷಣೆಗಾಗಿ ಸೈನಿಕರ ಜೀವವನ್ನು ಬಲಿಕೊಡುವ ಪದ್ಧತಿಯನ್ನು ಎಲ್ಲಾ ಕಾಲಕ್ಕೂ ವ್ಯವಸ್ಥಿತವಾಗಿ ರೂಪಿಸಿಕೊಂಡು ಬಂದಿರುವುದುನ್ನು ಕಾಣುತ್ತೇವೆ. ಬಡತನದ ಕಾರಣಕ್ಕೊ ಅಥವಾ ರಾಜ್ಯ ರಕ್ಷಣೆಯ ಉದ್ದೇಶಕ್ಕೋ ಸೈನ್ಯವನ್ನು ಸೇರಿದ ಕೆಳವರ್ಗದ ಜನರು ತಮ್ಮ ಪ್ರಾಣದ ಮೇಲಿನ ಆಸೆಯನ್ನು ಬಿಡುವಂತೆಯೂ, ಶತ್ರು ಸೈನ್ಯದ ಮೇಲಿನ ಕನಿಕರವನ್ನು ತೊರೆಯುವಂತೆಯು ಅವರನ್ನು ಮಾನಸಿಕವಾಗಿ ಸಿದ್ದಪಡಿಸಲಾಗುತ್ತದೆ. ಅಲ್ಲದೆ ಸೈನಿಕರಲ್ಲಿ ರಾಜ್ಯ ರಕ್ಷಣೆಯು ಒಂದು ಪವಿತ್ರ ಕಾರ್ಯ ಎಂಬ ಭಾವನೆಯನ್ನು ಬಿತ್ತಿ, ಯುದ್ಧದಲ್ಲಿ ಮರಣ ಹೊಂದಿದರೆ ವೀರಗಲ್ಲುಗಳನ್ನು ನೆಟ್ಟು ಆ ವೀರರನ್ನು ಕೊಂಡಾಡುವ ಪದ್ಧತಿಯನ್ನು ಜಾರಿಗೆ ತರಲಾಗಿತ್ತು.

> "ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ।
> ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ"

ಅಂದರೆ, ಗೆದ್ದರೆ ಲಕ್ಷ್ಮಿಯು ಒಲಿಯುತ್ತಾಳೆ, ಮಡಿದರೆ ಅಪ್ಸರೆಯರು ಬರುತ್ತಾರೆ. ನಿಮಿಷದಲ್ಲಿ ನಾಶವಾಗುವ ಈ ದೇಹಕ್ಕೆ ಯುದ್ಧದಲ್ಲಿ ಅಳಿಯುವೆನೆಂಬ ಕೊರಗೇಕೆ? ಎಂದು ಸೈನಿಕರನ್ನು ಮಾನಸಿಕವಾಗಿ ಸಿದ್ಧಗೊಳಿಸಿ ಪವಿತ್ರ ಕಾರ್ಯದ ಅಡಿ ಸಾವಿನ ದವಡೆಗೆ ತಳ್ಳಲಾಗುತ್ತಿತ್ತು.

ಡಾ. ಸಿದ್ದಲಿಂಗಯ್ಯ ಅವರ 'ಏಕಲವ್ಯ' ನಾಟಕದಲ್ಲಿ ಏಕಲವ್ಯ ಬೇಡನಾದರೂ ಪರಾಕ್ರಮಿ, ಬಿಲ್ವಿದ್ಯಾ ಪ್ರವೀಣನು ಆಗಿದ್ದ. ಕುರುಕ್ಷೇತ್ರ ಯುದ್ಧದಲ್ಲಿ ತಮ್ಮ ಪರವಾಗಿ ನಿಲ್ಲುವಂತೆ ಕೌರವರು ಮತ್ತು ಪಾಂಡವರು ಬೇಡಿಕೊಳ್ಳುತ್ತಾರೆ. "ಕಾಡಿನಲ್ಲಿರುವ ಪುಟ್ಟ ಪಡೆಯೊಂದರ ನಾಯಕನಾದ ಏಕಲವ್ಯ ದೊಡ್ಡ ಸಾಮ್ರಾಜ್ಯದ ಕುರುಸೇನೆಯನ್ನು ಸೇರಿ ಹೋರಾಡಿ ಹುತಾತ್ಮನಾಗಲಿ ಚರಿತ್ರೆಯಲ್ಲಿ ಅವನ ಹೆಸರು ಅಜರಾಮರವಾಗಲಿ" ಎಂದು ಹೇಳುವ ಮೂಲಕ ಏಕಲವ್ಯ ಕುರುಸೇನೆಯನ್ನು ಸೇರಲು ಪ್ರೇರೇಪಿಸುತ್ತಾರೆ. ಕೌರವ ಪಾಂಡವರ ಪಾಳೆಯಕ್ಕೆ ಸಂಬಂಧವೇ ಇಲ್ಲದ ಕೆಳವರ್ಗದ ಏಕಲವ್ಯನನ್ನು ಕುರುಕ್ಷೇತ್ರ ಯುದ್ಧದಲ್ಲಿ ಬಲಿ ನೀಡುವ ಮೇಲ್ವರ್ಗದವರ ಮನಸ್ಥಿತಿ ಮತ್ತು ಮನೋಭಾವವನ್ನು ಇಲ್ಲಿ ಕಾಣಬಹುದಾಗಿದೆ. ಸಮಯ ಮತ್ತು ಅವಶ್ಯಕತೆಗೆ ಅನುಗುಣವಾಗಿ ಕೆಳವರ್ಗದವರನ್ನು ಹೇಗೆ ಬಳಿಸಿಕೊಳ್ಳುತ್ತಾರೆ ಎಂಬುದನ್ನು ಅರಿತ ಏಕಲವ್ಯ ಕುಲಧರ್ಮ ಕಾಪಾಡುವ, ವೈಯುಕ್ತಿಕ ಹಿತಾಸಕ್ತಿಗಾಗಿ ನಡೆಯುವ ಯುದ್ಧದಿಂದ ದೂರ ಉಳಿಯುವ ನಿರ್ಧಾರ ಮಾಡಿ ಸ್ವತಂತ್ರನಾಗಿರಲು ಇಚ್ಚಿಸುತ್ತಾನೆ. ಇಲ್ಲಿ ಏಕಲವ್ಯ ಅಲಕ್ಷಿತ ವರ್ಗಗಳ ಪ್ರತಿನಿಧಿಯಾಗಿ, ಶೋಷಣೆ ಧಿಕ್ಕರಿಸುವ ಹಾಗೂ ವಿಮೋಚನೆಗೆ ಹಾತೊರೆಯುವ ವರ್ಗಗಳ ಪ್ರತಿನಿಧಿಯಂತೆ ಕಾಣುತ್ತಾನೆ. ಏಕಲವ್ಯನಂತಹ ಪರಾಕ್ರಮಿಯ ಬಗ್ಗೆಯೇ ಮೇಲ್ವರ್ಗದವರು ಲಕ್ಷ್ಯ ಕೊಡದೆ ಉದಾಸೀನ ಮಾಡುತ್ತಾರೆ. ಇನ್ನು ಸಾಮಾನ್ಯ ಸೈನಿಕರ ಗತಿ ಏನೆಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಏಕಲವ್ಯ ನಾಟಕದಲ್ಲಿ ಸೈನಿಕ-೨ ಯುದ್ಧದ ನಿಜವಾದ ಆಶಯವನ್ನು ಅರಿತವನಂತೆ ಕಾಣುತ್ತಾನೆ. "ಯಾರೋ ದಾಯಾದಿಗಳ ಕಿತ್ತಾಟಕ್ಕೆ ನಾವ್ ಯಾಕೆ ನಮ್ಮ ಪ್ರಾಣ ಕಳಕೋಬೇಕು?" ಎಂದು ಉಳಿದ ಸೈನಿಕರಿಗೆ ಯುದ್ಧದ ಹಿಂದಿರುವ ಸ್ವಾರ್ಥವನ್ನು ಹೇಳುತ್ತಾನೆ. ಆ ಮೂಲಕ ಯುದ್ಧವೆಂಬ ಮೃತ್ಯುಕೂಪದಿಂದ ವಿಮೋಚನೆಗೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅವನ ಮಾತನ್ನು ಒಪ್ಪದ ಸೈನಿಕ-೩ " ತಥ್ ದಡ್ ನನ್ಮಗಾ, ಸತ್ತರೆ ವೀರಸ್ವರ್ಗ! ಇಲ್ಲಿ ನಮ್ಮ ಹೆಣಾ ಉರುಳ್ತಿದ್ದಾಂಗೆ, ಸ್ವರ್ಗ ಲೋಕದ ಬಾಗಿಲಿನಲ್ಲಿ ರಂಬೆ, ಊರ್ವಶಿಯರು ಕಾಯ್ತಾ ಇರ್ತಾರೆ" ಎಂದು ಮೇಲ್ವರ್ಗದವರು ಬಿತ್ತಿದ ಮೌಢ್ಯಕ್ಕೆ ಸಿಲುಕುತ್ತಾನೆ. ಶೋಷಣೆಗೆ ಅಸಂಖ್ಯಾತ ಬಾಹ್ಯ ಪ್ರಚೋದನೆಗಳು ಕಾರಣವಾಗುತ್ತವೆ. ಆದರೆ ವಿಮೋಚನೆ ಎಂಬುದು ಬಾಹ್ಯ ಪ್ರಚೋದನೆಯ ಜೊತೆಗೆ ಸ್ವಯಂ ಪ್ರೇರಣೆಯನ್ನು ಸಹ ಬೇಡುತ್ತದೆ ಎಂಬುದಕ್ಕೆ ಈ ಸನ್ನಿವೇಶಗಳು ಸಾಕ್ಷಿಯಾಗಿ ನಿಲ್ಲುತ್ತವೆ.

ಲಿಂಗದೇವರು ಹಳೆಮನೆ ಅವರ 'ಚಿಕ್ಕದೇವ ಭೂಪ' ನಾಟಕದಲ್ಲಿ ಕೂಡ ಯದ್ಧದ ನೆಲೆಯಲ್ಲಿ ಸೈನಿಕರು ಶೋಷಣೆ ಅನುಭವಿಸುವುದನ್ನು ಕಾಣಬಹುದು. ರಾಜನ ಸಾಮ್ರಾಜ್ಯ ರಕ್ಷಣೆ ಮತ್ತು ವಿಸ್ತರಣೆಯಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳುವವರು ಸೈನಿಕರೆ ಆಗಿದ್ದಾರೆ. ರಾಜ ಪ್ರಭುತ್ವದಲ್ಲಿ ಮೇಲ್ವರ್ಗದವರ್‍ಯಾರು ಸೈನಿಕರಾಗಿ ದುಡಿಯುವುದಿಲ್ಲ. ಇದ್ದರೂ ಅಲ್ಲಿ ಉತ್ತಮ ಸ್ಥಾನಮಾನಗಳನ್ನು ಪಡೆದಿರುತ್ತಾರೆ. ಕೆಳವರ್ಗದಿಂದ ಸೈನ್ಯಕ್ಕೆ ಸೇರುವವರು ತಮ್ಮ ಕುಟುಂಬವನ್ನು ಸಾಕುವ ಉದ್ದೇಶದಿಂದ ಸೈನ್ಯ ಸೇರುತ್ತಾರೆ. ಯುದ್ಧಗಳಲ್ಲಿ ರಾಜ್ಯ ರಕ್ಷಣೆಗಾಗಿ ಹೋರಾಡಿ ಮಡಿದರೆ ಅದಕ್ಕೊಂದು ಅರ್ಥವುಂಟು. ಆದರೆ ಕೆಲವೊಮ್ಮೆ ರಾಜರ ನಡುವಿನ ವೈಯಕ್ತಿಕ ದ್ವೇಷದ ಬೆಂಕಿಯಲ್ಲಿ ಸೈನಿಕರು ಬೇಯುವಂತಾಗುವುದು ದುರಾದೃಷ್ಟವೇ ಸರಿ. ತಮ್ಮ ಪ್ರಾಣವನ್ನು ಒತ್ತೆಯಿಟ್ಟು ರಾಜನ ಹಿತಾಸಕ್ತಿಗೆ ಹೋರಾಡಿ ಪ್ರಾಣತೆತ್ತು ತಮ್ಮ ಕುಟುಂಬಗಳನ್ನು ಬೀದಿಗೆ ತಂದ ನಿದರ್ಶನಗಳು ಇತಿಹಾಸದಲ್ಲಿ ಹುದುಗಿ ಹೋಗಿವೆ. ರಾಜರು ತಮ್ಮ ರಾಜ್ಯ ವಿಸ್ತರಣೆ ಹಾಗೂ ರಕ್ಷಣೆ ದೃಷ್ಟಿಯಿಂದ ಯುದ್ಧ ಮಾಡುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಯುದ್ಧ ಎಂದರೆ ಶೋಷಣೆಯ ಪ್ರತಿ ರೂಪದಂತೆ ನೇರವಾಗಿ ಕಾಣದಿದ್ದರೂ ಯುದ್ಧದ ನಂತರದ ಸ್ಥಿತಿಗತಿಗಳು ಶೋಷಣೆಯನ್ನು ಸಾರಿ ಹೇಳುತ್ತವೆ. ಯುದ್ಧದಲ್ಲಿ ಗೆದ್ದವರು ಸೋತಂತೆ ಸೋತವರು ಸತ್ತಂತೆಯೆ ಎಂಬ ಮಾತು ಅಕ್ಷರಸಹ ಸತ್ಯ. ಯುದ್ಧದ ಅನುಭವ ಪಡೆದ, ಅಪಾರ ಸೈನಿಕರ ಸಾವನ್ನು ಕಣ್ಣಾರೆ ಕಂಡ ನಡುಬಾಗಿದ ನಿತ್ರಾಣಗೊಂಡಂತಿರುವ ಮುದಿ ಸೈನಿಕನ ಸೇವೆ ರಾಜಪ್ರಭುತ್ವಕ್ಕೆ ಬೇಕೆ ಎಂಬ ಪ್ರಶ್ನೆ ಮೂಡುತ್ತದೆ. ನಾಟಕದಲ್ಲಿ ಮುದಿ ಸೈನಿಕನ ಪಾತ್ರ ಶೋಷಣೆಗೆ ಸಾಕ್ಷಿಯಾಗಿ ನಿಂತಿದೆ. ಯುದ್ಧದಲ್ಲಿ ಯಾರೇ ಗೆದ್ದರು, ಸೋತರು ಎರಡೂ ಕಡೆಯ ಸೈನಿಕರು ತಮ್ಮ ಪ್ರಾಣ ಕಳೆದುಕೊಳ್ಳುತ್ತಾರೆ. ಅಂದರೆ ಯುದ್ಧದಲ್ಲಿ ಹೆಚ್ಚಿನ ಸಾವು-ನೋವು ಅನುಭವಿಸುವವರು ಸೈನಿಕರೇ ಆಗಿದ್ದಾರೆ. ಯುದ್ಧದಲ್ಲಿ ಸೈನಿಕರು ತಮ್ಮ ಪ್ರಾಣ ಉಳಿಸಿಕೊಂಡು ಬದುಕಿ ಬರುವುದೇ ನಿಜವಾದ ಗೆಲುವಾಗಿದೆ. ಹಾಗಾಗಿ ಯುವ ಸೈನಿಕ, ಮುದಿ ಸೈನಿಕನನ್ನು ಕುರಿತು "ಅಂತೂ ಎರಡು ಯುದ್ಧದಲ್ಲಿ ಯುದ್ಧ ಮಾಡಿ ನೀನು ಬದುಕಿ ಬಂದೆಯಲ್ಲ, ಪುಣ್ಯವಂತ" ಎನ್ನುತ್ತಾನೆ. ರಾಜ್ಯ ರಕ್ಷಣೆಗಲ್ಲದಿದ್ದರೂ ತಮ್ಮ ಪ್ರಾಣ ರಕ್ಷಣೆಗಾಗಿಯಾದರೂ ಹೋರಾಡಿ ಗೆಲ್ಲಬೇಕು ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಕಾಣಬಹುದು.

ರಾಜ್ಯಕ್ಕಾಗಿ ಹಗಲು ರಾತ್ರಿ ದುಡಿದರು ಕೂಡ ಸೈನಿಕರ ಸ್ಥಿತಿ ಮಾತ್ರ ಶೋಚನೀಯವಾಗಿರುತ್ತದೆ. ನೋಡುಗರ ಕಣ್ಣಿಗೆ ಅವರು ಪುಣ್ಯವಂತರಂತೆ ಕಾಣುತ್ತಾರೆ. ಆದರೆ ಅವರ ಆ ಪುಣ್ಯವಂತಿಕೆಯ ಹಿಂದಿರುವ ನೋವು ಅವರಿಗೆ ಹಾಗೂ ಅದನ್ನು ಅನುಭವಿಸಿದವರಿಗೆ ಮಾತ್ರ ಗೊತ್ತಿರುತ್ತದೆ. ಮುದಿ ಸೈನಿಕ ಅದನ್ನು ವಿಸ್ತೃತವಾಗಿ ವಿವರಿಸುತ್ತಾ, "ನಿಜ. ನಾವು ಪುಣ್ಯವಂತರು. ಅಣ್ಣ ತಮ್ಮಂದಿರನ್ನು ಕಳೆದುಕೊಂಡ ನಾವು. ಬೊಕ್ಕಸ ಖಾಲಿಯಾಗಿ ಅರ್ಧ ಸಂಬಳ ಪಡೆಯುತ್ತಿರುವ ನಾವು. ಮೈಯೆಲ್ಲಾ ಕಣ್ಣಾಗಿ ಅರೆಹೊಟ್ಟೆ ತಿಂದು ರಾಜರನ್ನು ಕಾಯುವ ನಾವು. ತಮ್ಮಾ ಇದೆಲ್ಲಾ ನನಗೆ ನಿರರ್ಥಕ ಅನ್ನಿಸುತ್ತೇ. ರಾಜರ ಸುಖಕ್ಕೆ ಎಷ್ಟು ಜನ ಬಲಿಯಾಗಬೇಕು?" ಎಂಬ ಮಾತುಗಳಲ್ಲಿ ಯುದ್ಧಗಳಲ್ಲಿ ಸಾವು ನೋವುಗಳನ್ನು ಕಣ್ಣಾರೆ ಕಂಡ, ಬಂಧು ಬಳಗದವರನ್ನು ಕಳೆದುಕೊಂಡ ಸೈನಿಕರ ಅಸಾಹಯಕತೆಗಳನ್ನು ಕಟ್ಟಿಕೊಡುತ್ತದೆ.

ಯುದ್ಧದಲ್ಲಿ ಸಾವುನೋವುಗಳು ಸಂಭವಿಸಿದರೆ ಮಾತ್ರ ಯುದ್ಧಕ್ಕೆ ಬೆಲೆ ಸೈನಿಕರಿಗೂ ಬೆಲೆ, ರಾಜ್ಯ ವಿಸ್ತರಣೆಯೂ ಸಾಧ್ಯ ಎಂದು ಕೆಲವು ಸೈನಿಕರು ಯುದ್ಧವನ್ನೇ ಶೌರ್ಯದ ಪ್ರತೀಕವೆಂಬಂತೆ ಭಾವಿಸಿಕೊಂಡಿರುತ್ತಾರೆ. ಹಾಗಾಗಿಯೇ ಇಲ್ಲಿ ಯುವ ಸೈನಿಕನೊಬ್ಬ "ಬಲಿಯಾಗದಿದ್ದರೆ ಅಖಂಡ ಕರ್ನಾಟಕದ ಸ್ಥಾಪನೆ ಹೇಗೆ ಸಾಧ್ಯ?" ಎಂದು ಮುದಿ ಸೈನಿಕನನ್ನು ಪ್ರಶ್ನಿಸುತ್ತಾನೆ. ಯುದ್ಧದ ಕರಾಳತೆಯನ್ನು ಪ್ರತ್ಯಕ್ಷವಾಗಿ ಅನುಭವಿಸದ ಯುವ ಸೈನಿಕ ಶೋಷಣೆಯ ಪ್ರತಿರೂಪವಾದ ಯುದ್ಧವನ್ನು ಶೌರ್ಯದ ಪ್ರತಿರೂಪವಾಗಿ ಕಾಣುವುದನ್ನು ಇಲ್ಲಿ ನೋಡಬಹುದು. ಯುವ ಸೈನಿಕನ ಯುದ್ಧೋನ್ಮತ್ತ ಮಾತುಗಳನ್ನು ಕೇಳಿದ ಮುದಿ ಸೈನಿಕ ವ್ಯಂಗ್ಯವಾಗಿಯೇ "ನಿನ್ನ ಮಾತೂ ನಿಜ. ಜನಗಳ ರಕ್ತಾಭಿಷೇಕದಿಂದಲೇ ರಾಜ್ಯ ಸ್ಥಾಪನೆಯಾಗಬೇಕು. ರಾಜರು ಸುಖವಾಗಿರಬೇಕು" ಎನ್ನುತ್ತಾನೆ. ಇಲ್ಲಿ ಯುದ್ಧದ ಮೂಲ ಉದ್ದೇಶ ರಾಜರ ಸುಖವೇ ಹೊರತು, ಪ್ರಜೆಗಳ

ಸುಖವಲ್ಲ ಎಂಬುದನ್ನು ಮುದಿ ಸೈನಿಕ ಸ್ಪಷ್ಟವಾಗಿ ಅರಿತಿದ್ದಾನೆ. ಕೆಲವು ಯುದ್ಧಗಳು ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಮತ್ತು ಸ್ವಪ್ರತಿಷ್ಠೆ ಮೆರೆಸಲಷ್ಟೆ ಸೀಮಿತವಾಗಿವೆ. ಯುದ್ಧದಲ್ಲಿ ಒಬ್ಬ ದೊರೆ ಸೋಲಬೇಕು ಇಲ್ಲ ಸಾಯಬೇಕು. ಯಾವ ದೊರೆ ಅಧಿಕಾರಕ್ಕೆ ಬಂದರೂ ಸೈನಿಕರು ಮಾತ್ರ ಹಳೆಯದನ್ನು ಮರೆತು ಗೆದ್ದ ರಾಜನ ಪರವಾಗಿ ಯುದ್ಧ ಮಾಡಬೇಕಾದದ್ದು ಅನಿವಾರ್ಯವಾಗಿತ್ತು. ಸೈನಿಕರ ಶೋಷಣೆಯು ಯುದ್ಧದ ರೂಪದಲ್ಲಿ ನಿರಂತರವಾಗಿ ನಡೆಯುತ್ತಲೇ ಇರುತ್ತಿತ್ತು. ಮುದಿ ಸೈನಿಕ ಈ ಶೋಷಣೆಯಿಂದ ಮಾನಸಿಕವಾಗಿ ವಿಮೋಚನೆಗೊಂಡಂತೆ ಕಂಡರು ದೈಹಿಕವಾಗಿ ವಿಮೋಚನೆಗೊಳ್ಳದೆ ಸೈನ್ಯದ ಭಾಗವಾಗಿ ದುಡಿಯುತ್ತಿರುವುದು ಅಂದಿನ ವಾಸ್ತವ ಸಮಸ್ಯೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ಕಿ.ರಂ.ನಾಗರಾಜು ರವರ 'ಕಾಲಜ್ಞಾನಿಕನಕ' ನಾಟಕದಲ್ಲಿಯೂ ಯುದ್ಧ ನಿರಾಕರಣೆಯ ಸನ್ನಿವೇಶ ಕಂಡುಬರುತ್ತದೆ. ಯುದ್ಧವೆಂಬ ಕರಾಳ ಕಿಚ್ಚಿಗೆ ಸಾಮಾನ್ಯ ಪ್ರಜೆಗಳು ಬಲಿಯಾಗುವುದು ಅಮಾನವೀಯವಾಗಿ ತೋರುತ್ತದೆ. ಮೇಲ್ನೋಟಕ್ಕೆ ರಾಜರ ನಡುವಿನ ಸಮರದಂತೆ ಕಂಡರು ಅದು ಬಹುಪಾಲು ಯುದ್ಧವೆಂದು ಕರೆಸಿಕೊಳ್ಳುವುದು ಸೈನಿಕರು ಅಥವಾ ಪ್ರಜೆಗಳ ನಡುವಿನ ಸಂಘರ್ಷದಿಂದಲೇ ಎಂಬುದನ್ನು ನಾಟಕಕಾರರು ಪ್ರತಿಪಾದಿಸುತ್ತಾರೆ.ಅದನ್ನೇ ವ್ಯಕ್ತಿ ೧ "ಯುದ್ಧ ರಾಜ ರಾಜರ ನಡುವೆ ನಡೆಯುತ್ತೆ ಅಂತ ಎಲ್ಲರೂ ತಿಳಿತಾರೆ, ಅದು ಸುಳ್ಳು, ಅದಕ್ಕೆ ತಲೆಕೊಡಬೇಕಾದವರು ನಮ್ಮಂತವರು, ಸಾಮಾನ್ಯರು. ಯುದ್ಧದಲ್ಲಿ ಒಬ್ಬ ರಾಜ ಗೆದ್ದ ಇನ್ನೊಬ್ಬ ರಾಜ ಬಿದ್ದ ಅನ್ನೋದು ಭ್ರಮೆ.ನಿಜವಾಗಿ ಸೋಲುವವರು ಅವರಲ್ಲ ನಾವು." ಎಂದು ಯುದ್ಧದ ಪರಿಣಾಮವನ್ನು ಅನುಭವಿಸುವವರು ಯಾರೆಂಬ ಸತ್ಯವನ್ನು ಹರವುತ್ತಾನೆ. ಹಾಗಾಗಿಯೇ 'ಕನಕನಾಯಕ ತಾನೆ ಏಕೆ ಯುದ್ಧಕ್ಕೆ ಹೋಗಬೇಕಾಗಿತ್ತು' ಎಂದು ಪ್ರಶ್ನಿಸುತ್ತಾನೆ. ಹೀಗೆ ಪ್ರಶ್ನಿಸುವ ಪ್ರಜ್ಞೆ ಜನಸಾಮಾನ್ಯರಲ್ಲಿ ಬಂದಾಗ ಶೋಷಣೆಯಿಂದ ವಿಮೋಚನೆ ಸಾಧ್ಯವೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕನಕನುಯುದ್ಧದಿಂದ ಹಿಂದಿರುಗಿ ಬಂದ ನಂತರ ಅವನು ಆಡುವ ಮಾತುಗಳಿಂದಲೇ ಯುದ್ಧದ ಬಗ್ಗೆ ಅವನಿಗಿದ್ದ ನಿರಾಸಕ್ತಿಯನ್ನು ತೋರಿಸುತ್ತದೆ. ತನ್ನ ಯುದ್ಧದ ಪರಾಕ್ರಮದ ಬಗ್ಗೆ ಪ್ರಜೆಗಳು ಹೊಗಳುತ್ತಿರುವಾಗ ಆ ಹೊಗಳಿಕೆಗೆ ತಾನು ಅರ್ಹನಲ್ಲವೆಂದು ತನ್ನ ನಡೆಯನ್ನು ಸ್ವವಿಮರ್ಶೆಗೊಳಗು ಮಾಡಿಕೊಳ್ಳುತ್ತಾನೆ. ಪ್ರಜೆಗಳ ಜೈಕಾರದ ಧೋರಣೆಗೆ ತದ್ವಿರುದ್ಧವಾದ ಮನಸ್ಥಿತಿಯನ್ನು ತಾಳುತ್ತಾನೆ. ಯುದ್ಧ ಮಾನವನ ಅಸ್ಥಿತ್ವವನ್ನೇ ನಾಶಮಾಡುವ ಕ್ರೂರ ಪ್ರಕ್ರಿಯೆ ಎಂದು ಕನಕನಿಗೆ ಅರಿವಾಗುತ್ತದೆ. ಹಾಗಾಗಿ "ಯುದ್ಧದಲ್ಲಿ ತೋರುತ್ತಿದ್ದ ನನ್ನ ತೋಲ್ಬಲಕ್ಕೆ ಈಗ ನಾನೇ ಧಿಕ್ಕಾರ ಹಾಕಿ ಕೂಗಬೇಕೆನಿಸುತ್ತಿದೆ. ಪರಾಕ್ರಮದ ಬಗ್ಗೆ ನನ್ನ ಅಸಹ್ಯ ಹುಟ್ಟಿದೆ, ಯುದ್ಧ ಮಾನವ ಲೋಕದ ಮಾಯದಗಾಯ.ಇಡೀ ಲೋಕವೇ ಯುದ್ಧದಿಂದ ಮುಕ್ತವಾಗಬೇಕೆನ್ನುವ ಭಾವನೆ ನನ್ನನ್ನು ಆವರಿಸುತ್ತಿದೆ ಎಂದು ಶೋಷಣೆಯ ಮೂಲವಾದ ಯುದ್ಧಗಳಿಂದ ವಿಮೋಚನೆಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತಾನೆ. ಯುದ್ಧವೆಂಬುದೇ ಅಸಮಾನತೆಯ ಸಂಕೇತ. ಅಲ್ಲಿ ಮನುಷ್ಯ ಹಾಗೂ ಮನುಷ್ಯತ್ವಗಳಿಗೆ ಬೆಲೆಯೇ ಇರುವುದಿಲ್ಲ. ರಾಜ, ಮಂತ್ರಿ, ಸೈನಿಕ ಮತ್ತು ಪ್ರಜೆ ಎಂಬ ಅಸಮಾನತೆಯ ನಡುವೆಯೇ ಯುದ್ಧವನ್ನು ಗೆಲ್ಲಬೇಕಾದ ಅನಿವಾರ್ಯತೆ ಇದೆ. ಹಾಗೆಯೇ ಗೆದ್ದ ಯುದ್ಧದಿಂದ ಲಾಭ ಪಡೆಯುವವನು ರಾಜ, ನಷ್ಟ ಅನುಭವಿಸುವವರು, ಜೀವ ಕಳೆದುಕೊಳ್ಳುವವರು ಕೆಳವರ್ಗದ ಸೈನಿಕರು ಅಥವಾ ಪ್ರಜೆಗಳು. ಹಾಗಾಗಿಯೇ ಕನಕನ ಅಂತರಂಗದಲ್ಲಿ ಎಲ್ಲಾ ಜೀವಿಗಳು ಒಂದೇ ಎಂಬ ಸಮತಾವಾದ ಮನೆ ಮಾಡುತ್ತದೆ. ಜಗತ್ತು ಸುಂದರವಾಗಿ ಧೀರ್ಘಕಾಲ ಬಾಳಬೇಕಾದರೆ ಅಗತ್ಯವಾದುದು ಪ್ರೇಮವೇ ಹೊರತು ಯುದ್ಧವಲ್ಲ ಎಂಬ ಪ್ರಜ್ಞೆಯನ್ನು ಜನರಲ್ಲಿ ಬಿತ್ತುತ್ತಾನೆ. ಪ್ರೇಮ ಸಂಬಂಧಗಳು ಜೀವಗಳನ್ನು ಉಳಿಸುತ್ತವೆ ಬೆಳಸುತ್ತವೆ ಆದರೆ ಯುದ್ಧಗಳು ಸಂಬಂಧಗಳನ್ನು ಕತ್ತರಿಸುತ್ತವೆ ಜೀವಗಳನ್ನು ಅಳಿಸುತ್ತವೆ. ಹಾಗಾಗಿಯೇ, ಕನಕ ಪ್ರೇಮದ ಮಹತ್ವನ್ನು ಸಾರಿ ಯುದ್ಧವನ್ನು ನಿರಾಕರಿಸುತ್ತಾನೆ. ಪ್ರೇಮವಿಲ್ಲದ ಹೃದಯ ಅದೊಂದು ಸುಡುಗಾಡು ಎಂದು ಪರಿಗಣಿಸುತ್ತಾನೆ. ಯುದ್ಧಗಳಿಲ್ಲದೆ ಹಿಂಸೆಗಳಿಲ್ಲದೆ ಆಯುಧಗಳ ಅಹಂಕಾರವಿಲ್ಲದೆ ಮನುಷ್ಯ ಬದುಕಬಹುದೆಂಬ ವಾಸ್ತವ ಬದುಕಿನ ಪ್ರಜ್ಞೆ ಕನಕನಲ್ಲಿ ಜಾಗೃತವಾಗುತ್ತದೆ. ಯುದ್ಧದಿಂದ ವಿಮೋಚನೆ ಹೊಂದಬೇಕಾದರೆ ನಮ್ಮ ಅಂತರಂಗದಲ್ಲಿ ಅದರ ಬಗ್ಗೆ ಇರುವ ಭಯ, ಆತಂಕಗಳನ್ನು ಬಿಡಬೇಕು. ಭಯದ ವಾತಾವರಣದಲ್ಲಿ ಬದುಕುವುದು ಯುದ್ಧಕ್ಕೆ ಆಹ್ವಾನವಿತ್ತಂತೆಯೇ. ಅಂದರೆ ಶೋಷಣೆಗೆ ನಾವೇ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂಬುದನ್ನು ಹೇಳುತ್ತಾನೆ. ಹಾಗಾಗಿ ಪ್ರೀತಿಯಿಂದ ಮಾತ್ರ ಭಯದ ನಿವಾರಣೆ ಸಾಧ್ಯ. ಪ್ರೀತಿ ತುಂಬಿದ ಭಯಮುಕ್ತ ವಾತಾವರಣದಲ್ಲಿ ಕ್ರೌರ್ಯಕ್ಕೆ ಅವಕಾಶವೇ ಇರುವುದಿಲ್ಲ. ಪ್ರೀತಿ ಯುದ್ಧವನ್ನು ಗೆಲ್ಲಬಲ್ಲ, ಅದರಿಂದ ವಿಮೋಚನೆ ಹೊಂದಬಲ್ಲ ಅಸ್ತ್ರವಾಗಿದೆ ಎಂಬ ಸತ್ಯವನ್ನು ಕನಕ ಪ್ರಜೆಗಳಿಗೆ ಅರ್ಥ ಮಾಡಿಸುತ್ತಾನೆ.

ಯುದ್ಧ ಶೋಷಣೆಯ ಪ್ರತೀಕವೆಂಬುದು ಸಾರ್ವಕಾಲಿಕ ಸತ್ಯ. ಅದರಿಂದ ವಿನಾಶವೇ ಹೊರತು ನವಸೃಷ್ಟಿ ಸಾಧ್ಯವಿಲ್ಲ. ಕನಕ ಹೇಳುವಂತೆ "ಯುದ್ಧ ಮುಗ್ಧರನ್ನು ಅರಳುವ ಪೀಳಿಗೆಯನ್ನು ನಾಶ ಮಾಡುತ್ತದೆ." ಮನುಷ್ಯನ ಅಸ್ತಿತ್ವವನ್ನೇ ಅಳಿಸಿಹಾಕುವ ಸಾಮರ್ಥ್ಯ ಯುದ್ಧಕ್ಕಿದೆ. ಈ 'ಕಾಲಜ್ಞಾನ' ಕನಕನಿಗೆ ತಿಳಿದ ಕಾರಣ ಯುದ್ಧವನ್ನು ನಿರಾಕರಿಸುತ್ತಾನೆ. ಆದರೆ ಅಲ್ಲಿದ್ದವರಿಗೆ ಯುದ್ಧವಿಲ್ಲದ ಸಮಾಜವನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕನಕರ ವಾಸ್ತವವಾದವನ್ನು, ನಿಜ ಬದುಕನ್ನು ಅರ್ಥೈಸಿಕೊಳ್ಳದೆ ಅದೊಂದು ಆದರ್ಶವಾದವೆಂದೇ ನಂಬುತ್ತಾರೆ. ಹಾಗಾಗಿ ವ್ಯಕ್ತಿ–೧ "ಬೇಕಾದ ಕಡೆ ಯುದ್ಧವನ್ನು ಒಪ್ಪಿ, ಬೇಡ ಅನ್ನುವ ಕಡೆ ಬಿಟ್ಟರೆ ಕ್ಷೇಮ ಸಾಧನೆ ಸಾಧ್ಯವಲ್ಲವೆ?" ಎಂದು ಪ್ರಶ್ನಿಸುತ್ತಾನೆ. ಯಾರು ಹೇಗೆ ಪ್ರಶ್ನಿಸಿದರೂ ಕನಕ ತನ್ನ ನಿರ್ಧಾರವನ್ನು ಬದಲಿಸುವುದಿಲ್ಲ. ರಾಜರ ಅಹಂಕಾರದ ಸೃಷ್ಟಿಯೇ ಯುದ್ಧ ಎಂದು ಆತ ನಂಬಿರುತ್ತಾನೆ. ಹಾಗಾಗಿ "ಯುದ್ಧ ರಾಜರ ಅಹಂಕಾರದ ಚದುರಂಗದ ಆಟ, ಮನುಷ್ಯರು ಆ ಆಟದ ಕಾಯಿಗಳು. ದು:ಖದ ದುರ್ದೆಶೆಯಕತ್ತಲಲ್ಲಿ ಕೂಲಿಗಾರರು ತಮ್ಮ ಮೈಮನಗಳನ್ನು ಮಾರುತ್ತಾ ಇದ್ದಾರೆ" ಎಂದು ಉತ್ತರಿಸುತ್ತಾನೆ. ಕನಕನ ಪಾಲಿಗೆ ಬಾಡ, ಕಾಗಿನೆಲೆ, ಬಂಕಾಪುರ ಎಂದರೆ ನೆನಪಾಗುವುದು ಮುಗ್ಧ ರೈತರು, ಕಾಯಕಮಂದಿ, ಮೈಮುರಿದು ದುಡಿಯುವ ಜನ. ಅವರುಗಳನ್ನು ಯುದ್ಧಗಳಿಂದಾಗುವ ಶೋಷಣೆಗಳಿಂದ ಬಿಡುಗಡೆಗೊಳಿಸಲು ಹಾತೊರಿಯುತ್ತಾನೆ. ಯುದ್ಧದಿಂದ ಮನುಷ್ಯ ಮಾತ್ರವಲ್ಲದೆ ಅವನೊಂದಿಗೆ ಬೆಸೆದುಕೊಂಡಿರುವ ಎಲ್ಲಾ ಸಂಬಂಧಗಳು ನಾಶವಾಗುತ್ತವೆ. ರಾಜರ ಅಧಿಕಾರದ ಲಾಲಸೆಗಾಗಿ ನಡೆಯುವ ಯುದ್ಧಗಳಿಂದ ಪ್ರಜೆಗಳಿಗೆ ಮತ್ತು ಸೈನಿಕರಿಗಷ್ಟೆ ನಷ್ಟವೆಂಬವಾಸ್ತವ ಸತ್ಯವನ್ನು ಕನಕ ಪ್ರಜೆಗಳಿಗೆ ಅರ್ಥೈಸಲು ಮುಂದಾಗುತ್ತಾನೆ.ಯುದ್ಧದಿಂದ ವಿಮೋಚನೆ ಹೊಂದಬೇಕಾದ ಅನಿವಾರ್ಯತೆಯನ್ನು ಕನಕ ವ್ಯಕ್ತಪಡಿಸುತ್ತಾನೆ.

ಯುದ್ಧಗಳು ರಾಜರ ಕಟ್ಟಕಡೆಯ ಸಾಧನವಾಗಬೇಕೆ ಹೊರತು

ಪ್ರತಿಷ್ಠೆ ಮತ್ತು ಶೌರ್ಯ ಪ್ರದರ್ಶನಕ್ಕೆ ಕಟ್ಟುಬಿದ್ದು ದುರಂತಗಳನ್ನು ಸೃಷ್ಟಿಸಬಾರದು. ಯದ್ಧವೆಂದರೆ ಬರಿ ಭೂಭಾಗ ಕಾಯ್ದು ಕೊಳ್ಳುವುದಲ್ಲದೆ ಪ್ರಜೆಗಳ ಪ್ರಾಣ ಮಾನಗಳನ್ನು ಕಾಯ್ದುಕೊಳ್ಳುವ ಜವಾಬ್ದಾರಿ ರಾಜರ ಮುಖ್ಯ ಕರ್ತವ್ಯವಾಗಬೇಕು.ಯುದ್ಧ ಸಾರಿ ದಂಡೆತ್ತಿಬಂದ ಶತ್ರು ಸೈನ್ಯವನ್ನು ಯುದ್ಧವಿಲ್ಲದೆ ಮಣಿಸುವ ತಂತ್ರಗಳನ್ನು ರಾಜರುಗಳು ಅನುಸರಿಸಬೇಕು, ಯುದ್ಧದಿಂದಾಗುವ ವಿದ್ವಾಂಸಕತೆಯನ್ನು ತಿಳಿಸುತ್ತಲೇ ಶತ್ರುಗಳ ಪಾಳೆಯದಲ್ಲಿ ಭಿನ್ನಮತಗಳನ್ನು ಸೃಷ್ಟಿಸಿ ಎದುರಾಳಿಯ ಮನೋಬಲವನ್ನು ಕುಗ್ಗಿಸಿ ರಾಜಿಗಾಗಿ ಮಂಡಿಯೂರುವಂತೆ ಮಾಡುವುದು ಸಹ ಯುದ್ಧ ತಂತ್ರಗಳಲ್ಲೊಂದು.

ಯದ್ಧಗಳಿಂದಾಗುವ ಸಾವು – ನೋವು, ಆಸ್ತಿ – ಪಾಸ್ತಿಗಳಿಗೆ ಬೆಲೆ ಕಟ್ಟಲಾಗದು. ಬಿಸಿ ರಕ್ತ ಚಿಮ್ಮಿ ರಣರಂಗವಾಗುವ ಯುದ್ಧ ಭೂಮಿಗಳನ್ನು ನೀರು ಹಾಯಿಸಿ, ಪೈರು ಬೆಳೆದು ಶ್ರಮಿಕರ ಹೊಟ್ಟೆ ತುಂಬಿಸುವ ಕೆಲಸಗಳನ್ನು ರಾಜಪ್ರಭುತ್ವಗಳು ಮಾಡಬೇಕು ಎಂಬ ಆಶಯಗಳನ್ನು ಈಮೂರು ನಾಟಕಗಳಲ್ಲೂ ವ್ಯಕ್ತವಾಗಿರುವುದನ್ನು ಕಾಣಬಹುದು. ಸ್ವಪ್ರತಿಷ್ಠೆ ವೈಯಕ್ತಿಕ ಶೌರ್ಯಗಳನ್ನು ವೈಭವಿಕರಿಸುವ ಹೊರತಾಗಿ ಜನಸಾಮನ್ಯರ ಬದುಕು ಬವಣೆಗಳನ್ನು ಅರ್ಥಮಾಡಿಕೊಂಡು ಸಕಲ ಜೀವಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುವ ಕೆಲಸಗಳು ಎಲ್ಲ ಕಾಲಕ್ಕೂ ನಡೆಯಬೇಕಿದೆ. ಈಗ ರಾಜಪ್ರಭುತ್ವ ಕೊನೆಗೊಂಡಿದ್ದರು ಶೋಷಣೆಗಳು ಬೇರೆ ಬೇರೆ ರೂಪದಲ್ಲಿ ಜೀವಂತವಾಗಿವೆ. ಆಳುವ ಸರ್ಕಾರಗಳು ಇಂತಹ ಜೀವಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು, ಶ್ರಮಿಕ ವರ್ಗಗಳ ಕಷ್ಟಗಳಿಗೆ ಧ್ವನಿಯಾಗಿ ಕೆಲಸ ಮಾಡಬೇಕು ಎಂಬುದು ಬಹುಜನರ ನಿರೀಕ್ಷೆಯಾಗಿದೆ.

**ಆಕರ ಗ್ರಂಥಗಳು**

೧. ಡಾ. ಸಿದ್ದಲಿಂಗಯ್ಯ – ಏಕಲವ್ಯ.
೨. ಲಿಂಗದೇವರು ಹಳೆಮನೆ – ಚಿಕ್ಕದೇವಭೂಪ.
೩. ಕಿ.ರಂ ನಾಗರಾಜ್ – ಕಾಲಜ್ಞಾನಿ ಕನಕ.

**ಪರಾಮರ್ಶನ ಗ್ರಂಥಗಳು**

೧. ಕೆ. ಮರಳ ಸಿದ್ದಪ್ಪ – ಆಧುನಿಕ ಕನ್ನಡ ನಾಟಕ, ಸಪ್ನ ಬುಕ್ ಹೌಸ್, ೨೦೧೮.
೨. ಗಿರಡ್ಡಿ ಗೋವಿಂದರಾಜು – ನಾಟಕ ಸಾಹಿತ್ಯ ಮತ್ತು ರಂಗಭೂಮಿ, ಹೇಮಂತಸಾಹಿತ್ಯ, ೨೦೧೪.
೩. ಬಿ. ಗಂಗಾಧರ ಮೂರ್ತಿ – ಭಾರತೀಯ ಭಾಷ ಸಾಹಿತ್ಯಗಳ ವರ್ಗಸೆಲೆ, ಲಡಾಯಿ ಪ್ರಕಾಶನ, ೧೯೭೯.
೪. ಡಾ. ಕೆ.ಮೋಹನ್‌ಕೃಷ್ಣ ರೈ – ಯುದ್ಧ ಮತ್ತು ಒಪ್ಪಂದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭.
೫. ಬಸವರಾಜ ಪಿ. ಡೋನೂರ– ಕನ್ನಡ ನಾಟಕ ಮತ್ತು ವಾಸ್ತವತೆ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೮.
೬. ಡಾ. ಉಷಾದೇವಿ(ಲೇಖನ)– ಶೋಷಣೆಯ ವಿವಿಧ ಮುಖಗಳು, ಅರುಹು ಕುರುಹು, ತ್ರೈಮಾಸಿಕ, ಸಂಪುಟ – ೧೨.